# ಬ್ರಿಟೀಷರ ವಿರುದ್ಧ ಹಲಗಲಿ ಬೇಡ ಜನಾಂಗದ ಹೋರಾಟ

ಎಲ್.ಎಂ. ಕಲ್ಯಾಣಶೆಟ್ಟಿ
ಉಪನ್ಯಾಸಕಿಯರು, ಕನ್ನಡ ವಿಭಾಗ, ಶ್ರೀ ಎಸ್.ಆರ್ ಕಂಠಿ ಪದವಿ ಮಹಾವಿದ್ಯಾಲಯ, ಮುಧೋಳ.

DOI: https://doi.org/10.5281/zenodo.17411491

## ABSTRACT:

ಸ್ವಾತಂತ್ರ್ಯ ಹೋರಾಟದಲ್ಲಿ ಶ್ರೇಷ್ಠ–ಕನಿಷ್ಟ ಎನ್ನುವ ಭೇದಭಾವವನ್ನಳಿದು ಭಾಗವಹಿಸಿದವರೆಲ್ಲ ಮಹಾತ್ಮರಾಗದಿದ್ದರೂ ಹುತಾತ್ಮರಾಗಿದ್ದಾರೆ. ವೀರ ಪರಂಪರೆಯನ್ನು ವಿಶಿಷ್ಟವಾಗಿ ಬೆಳೆಸಿಕೊಟ್ಟ ನಾಡು ಈ ಭರತಭೂಮಿ. 1820 ರಿಂದ 1858ರ ಕಾಲಘಟ್ಟ ಭಾರತದ ಇತಿಹಾಸದಲ್ಲಿ ಅತೀ ಪ್ರಮುಖ ಘಟ್ಟ. ಇದೇ ಅವಧಿಯಲ್ಲಿ ಪ್ರಥಮ ಸಂಗ್ರಾಮದಂತಹ ಪ್ರಮುಖವಾದ ಘಟನೆಗಳು ಸಂಭವಿಸಿದವು. ಭಾರತ ದೇಶದ ಬೇರೆ ಬೇರೆ ಸ್ಥಳಗಳಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಹತ್ತಾರು ಪ್ರದೇಶದಲ್ಲಿ ಬ್ರಿಟೀಷರ ವಿರುದ್ಧ ಬಂಡಾಯ, ಚಳುವಳಿಗಳು, ಸಂಘರ್ಷಗಳು ನಡೆದುಹೋದವು. ಅವುಗಳಲ್ಲಿ ಕರ್ನಾಟಕದ ಬದಾಮಿ, ಕಿತ್ತೂರು, ಕೊಡಗು, ನರಗುಂದ, ಮುಂಡರಗಿ, ಸುರಪುರಗಳಲ್ಲಿ ಬ್ರಿಟೀಷರ ನೀತಿಗಳ ವಿರುದ್ಧ ದೊಡ್ಡ ಮಟ್ಟದ ಹೋರಾಟಗಳು ನಡೆದವು. ಕೆಲವು ಹೋರಾಟಗಳು ಕ್ರಾಂತಿಕಾರಿ ಸ್ವರೂಪದ್ದಾಗಿದ್ದವು. ಇವೆಲ್ಲವುಗಳಿಗಿಂತಲೂ ಹಲಗಲಿಯ ಬೇಡರ ಹೋರಾಟ ಚಿರಸ್ಮರಣೀಯ. ಏಕೆಂದರೆ ಬ್ರಿಟೀಷರ ಶಸ್ತ್ರಾಸ್ತ್ರ ಕಾಯಿದೆ ವಿರುದ್ಧ ಶೂರತನದಿಂದ ಹೋರಾಟ ನಡೆಸಿದರು. ಬ್ರಿಟೀಷರಿಗೆ ತಮ್ಮ ಶಸ್ತ್ರಗಳನ್ನ ಒಪ್ಪಿಸಲು ನಿರಾಕರಿಸಿ ತಮ್ಮ ಜೀವಗಳನ್ನೇ ಪಣಕ್ಕಿಟ್ಟು ಹೋರಾಡಿದ ಘಟನೆ ಇತಿಹಾಸದ ಪುಟದಲ್ಲಿ ಸ್ಮರಣೀಯವಾದುದು. ಯಾರ ನೆರವೂ ಇಲ್ಲದೆ ಹೋರಾಡಿ ನೂರಾರು ಜನ ಪ್ರಾಣ ತೆತ್ತರು. ಬೇಟೆಯಾಡಿಕೊಂಡು ತಮ್ಮ ಜೀವನ ನಡೆಸುತ್ತಿದ್ದ ಜನರ ಮೇಲೆ ಆಕ್ರಮಣ ನಡೆಸಿದ ಬ್ರಿಟೀಷರ ಕೃತ್ಯವನ್ನು ಯಾರೂ ಕ್ಷಮಿಸಲಾರರು.

## KEYWORDS:

ಬೇಡ ಜನಾಂಗ, ಶಸ್ತ್ರಾಸ್ತ್ರ, ಘೋರ್ಪಡೆ, ಅಶ್ವಪಡೆ, ಕಲಾದಗಿ, ಲಾವಣಿ, ಖಡ್ಗ.

**1. ಪೀಠಿಕೆ:**

1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಒಳಗೊಂಡಂತೆ, ಭಾರತದಲ್ಲಿ 19ನೇ ಶತಮಾನದ ಕಾಲಘಟ್ಟದಲ್ಲಿ ಪ್ರಮುಖವಾದ, ಪ್ರತಿಭಟನೆ, ದಂಗೆ, ಪ್ರತಿರೋಧ ಮತ್ತು ಸಂಗ್ರಾಮಗಳು ಜರುಗಿದವು. ಇವುಗಳಲ್ಲಿ ಕೆಲವು ಉಗ್ರ ಸ್ವರೂಪವನ್ನು ಪಡೆದುಕೊಂಡವು. ದೇಶದ ನಾನಾ ಭಾಗಗಳಲ್ಲಿ ಬುಡಕಟ್ಟು ಜನ, ರೈತರು, ಭೂರಹಿತ ಕಾರ್ಮಿಕರು, ಅರಣ್ಯವಾಸಿಗಳು ಇನ್ನೂ ಮುಂತಾದವರು ಬ್ರಿಟೀಷ್ ಸರ್ಕಾರದ ನೀತಿಗಳ ವಿರುದ್ಧ ಹೋರಾಟ ನಡೆಸಿದರು. ಅವುಗಳಲ್ಲಿ ಭಿಲ್ಲರು, ರಾಮೋಸಿ, ಖಾಸಿ, ಸಂತಾಲ, ಬಿರ್ಸಾಮುಂಡ, ಥಾನಾ ಭಗತ್ ಮುಂತಾದವುಗಳನ್ನು ಹೆಸರಿಸಬಹುದು. ಇಂತಹದೇ ಹಲವಾರು ಘಟನೆಗಳು ಕರ್ನಾಟಕದಲ್ಲಿಯೂ ಜರುಗಿದವು. ಕಿತ್ತೂರು, ಬದಾಮಿ, ಕೊಡಗು, ನರಗುಂದ, ಮುಂಡರಗಿ ಘಟನೆಗಳನ್ನು ಇಲ್ಲಿ ಉದಾಹರಿಸಬಹುದು. ಆದರೆ ಇವುಗಳಿಗಿಂತಲೂ ಪ್ರಮುಖವಾದ ಘಟನೆಯೊಂದು ಕರ್ನಾಟಕದಲ್ಲಿ ಜರುಗಿದ್ದು, ಅದುವೇ ಹಲಗಲಿ ಬೇಡ ಬುಡಕಟ್ಟು ಜನರ ಸಂಘರ್ಷ. ಬ್ರಿಟೀಷರ ಶಸ್ತ್ರಾಸ್ತ್ರ ಕಾಯಿದೆ ವಿರುದ್ಧ ಬಂಡೆದ್ದ ಕರ್ನಾಟಕದ ಏಕೈಕ ಹೋರಾಟವಿದು. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಭಾರತೀಯರ ವಿರುದ್ಧವಾಗಿ ಈ ಕಾಯಿದೆಯನ್ನು ಜಾರಿಗೆ ತರಲಾಗಿತ್ತು. ಇಂತಹ ಶಸ್ತ್ರಾಸ್ತ್ರ ಕಾಯಿದೆಯನ್ನು ದೇಶದ ಇತರ ಸಂಸ್ಥಾನಗಳಂತೆ ಮುಧೋಳ ಸಂಸ್ಥಾನದಲ್ಲಿಯೂ ಕಾರ್ಯಗತಗೊಳಿಸಲಾಯಿತು. ಶಸ್ತ್ರಾಸ್ತ್ರ ಹೊಂದಿರುವ ಎಲ್ಲ ಭಾರತೀಯರೂ ಸರ್ಕಾರಕ್ಕೆ ಒಪ್ಪಿಸುವ ಮತ್ತು ಪರವಾನಿಗೆಗಳನ್ನು ಪಡೆಯುವುದು ಕಡ್ಡಾಯ ಮಾಡಲಾಯಿತು. ಇಂತಹ ನೀತಿಯ ವಿರುದ್ಧ ಹಲಗಲಿಯ ಬೇಡ ಜನಾಂಗ ಬಂಡೆದ್ದು, ತಮ್ಮ ಬಳಿ ಇರುವ ಶಸ್ತ್ರಾಸ್ತ್ರಗಳನ್ನು ಬ್ರಿಟೀಷರಿಗೆ ಒಪ್ಪಿಸುವ ಬದಲು ಅವರೊಡನೆ ತೀವ್ರ ಸಂಘರ್ಷ ನಡೆಸಿದರು. ಶೂರತನದಿಂದ ಹೋರಾಡಿದರು. ನೂರಾರು ಜನ ಈ ಹೋರಾಟದಲ್ಲಿ ತಮ್ಮ ಪ್ರಾಣವನ್ನು ಕಳೆದುಕೊಂಡರು. ಬದುಕುಳಿದ ಕೆಲವರು ಅನ್ಯ ಪ್ರದೇಶಗಳಿಗೆ ಪಲಾಯನಗೊಂಡರು. ಸೆರೆ ಸಿಕ್ಕ ಬೇಡರ ತಂಡದ ನಾಯಕರನ್ನು ಗಲ್ಲಿಗೇರಿಸಲಾಯಿತು. ಯಾರ ಸಹಾಯವೂ ಇಲ್ಲದೆ ಹೋರಾಡಿ ವೀರಮರಣ ಹೊಂದಿದ ಈ ಬೇಡ ಜನಾಂಗದ ಶೌರ್ಯ ಎಲ್ಲರಿಗೂ ಆದರ್ಶಪ್ರಾಯವೆನ್ನಬಹುದು.

**2. ಹಲಗಲಿ ಗ್ರಾಮ:**

ಇದು ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಐತಿಹಾಸಿಕ ಮಹತ್ವ ಪಡೆದ ಗ್ರಾಮವಾಗಿದೆ. ತಾಲೂಕು ಕೇಂದ್ರ ಮುಧೋಳದಿಂದ 28 ಕಿ.ಮೀ ಮತ್ತು ಜಿಲ್ಲಾಕೇಂದ್ರದಿಂದ 56 ಕಿ.ಮೀ ದೂರದಲ್ಲಿದೆ. ಕಿರು ಬೆಟ್ಟಗಳ ಪರಿಸರದಲ್ಲಿರುವ ಇದು, ತಾಲೂಕಿನ ಕೊನೆಯ ಗ್ರಾಮ. ಈ ಗ್ರಾಮ ಅಂದು ಮುಧೋಳದ ಘೋರ್ಪಡೆ ಸಂಸ್ಥಾನದ ಆಧೀನದಲ್ಲಿ ಬರುವ ಪ್ರಮುಖ ಪ್ರದೇಶವಾಗಿತ್ತು.

**3. ಬೇಡ ಜನಾಂಗ:**

ಬೇಡರು ದ್ರಾವಿಡರ ಪ್ರಮುಖವಾದ ಒಂದು ದ್ರಾವಿಡ ಬುಡಕಟ್ಟು ಜನಾಂಗವಾಗಿದೆ. ಬೇಡ ಜನಾಂಗ ಕರ್ನಾಟಕದ ಪ್ರಮುಖವಾದ ಜನಸಮೂಹ, ಬಹುತೇಕ ಬೆಟ್ಟಮಯ ಮತ್ತು ಗುಡ್ಡಗಾಡು ಪ್ರದೇಶದ ನಿವಾಸಿಗಳು. ಇವರು ತಮ್ಮದೇ ಆದಂತಹ ವಿಶೇಷ ಜೀವನ ಶೈಲಿ ಮತ್ತು ಆಚರಣೆಗಳನ್ನು ಹೊಂದಿರುವುದು ತಿಳಿದುಬರುತ್ತದೆ. ಕರ್ನಾಟಕ ಬುಡಕಟ್ಟು ಇಲಾಖೆಯ ಮಾಹಿತಿಯಂತೆ 50ಕ್ಕಿಂತಲೂ ಹೆಚ್ಚಿನ ಬುಡಕಟ್ಟುಗಳು ನಮ್ಮಲ್ಲಿವೆ. ಅವುಗಳಲ್ಲಿ, ಬೇಡ, ಹಕಿಪಿಕ್ಕಿ, ಜೇನು ಕುರುಬ, ಕಾಡು ಕುರುಬ, ಸೋಲಿಗ, ಸಿದ್ಧಿ, ಎರವಾ ಇನ್ನೂ ಮುಂತಾದವು ಪ್ರಮುಖವಾಗಿವೆ. ಬೇಡ ಜನ ಸಮೂಹವು ಭಾರತದ ಅತೀಪ್ರಾಚೀನ

ಬುಡಕಟ್ಟುಗಳಲ್ಲಿ ಒಂದಾಗಿದ್ದು, ತಮ್ಮನ್ನು ರಾಮಾಯಣ ರಚಿಸಿದ ಮಹರ್ಷಿ ವಾಲ್ಮೀಕಿಯ ವಂಶಜರೆಂದು ನಂಬಿರುವರು. ಸುಮಾರು 1820 ರಿಂದ 1942ರ ಅವಧಿಯಲ್ಲಿ ಬ್ರಿಟೀಷರ ವಿರುದ್ಧ ವಿವಿಧ ಪ್ರದೇಶಗಳಲ್ಲಿ ಹೋರಾಟ ನಡೆಸಿದರು. ವಸಾಹತು ಸರ್ಕಾರದ ಕಾಲದಲ್ಲಿದ್ದ ಈ ಜನಾಂಗದ ಕೆಲವರು ಪಾಳೆಯಗಾರಿಕೆಯನ್ನು ನಡೆಸುತ್ತಿದ್ದರು. ಬ್ರಿಟೀಷರ ನೀತಿಗಳ ವಿರುದ್ಧ ಕೆಲವರು ಸಂಘರ್ಷಕ್ಕಿಳಿದ ಕಾರಣ ಇವರನ್ನು ಕಾನೂನು ಭಂಜಕರೆಂದು ಪರಿಗಣಿಸಲಾಗಿತ್ತು. ಈ ಬೇಡ ಜನಾಂಗವು ಬೇಟೆಯಾಡುವುದನ್ನು ತಮ್ಮ ಪ್ರಮುಖ ಕಾಯಕವನ್ನಾಗಿ ಮಾಡಿಕೊಂಡಿದ್ದರೂ, ಕೃಷಿಕರಾಗಿ, ಗ್ರಾಮದ ಕಾವಲುಗಾರರಾಗಿ, ದನಗಾಹಿಗಳಾಗಿ, ಸೈನಿಕರಾಗಿ ಸೇವೆ ಸಲ್ಲಿಸಿರುವುದು ನಮಗೆ ಕಂಡುಬರುತ್ತದೆ. ಹಲಗಲಿಯ ಬೇಡರು ಕೂಡ ಇಂತಹದೇ ಜೀವನ ಶೈಲಿಯನ್ನು ನಡೆಸಿಕೊಂಡು ತಮ್ಮ ಬದುಕನ್ನು ಕಟ್ಟಿಕೊಂಡಿದ್ದರು. ಬೇಟೆಯೇ ಅವರ ಪ್ರಮುಖ ಕಸುಬಾಗಿತ್ತು. ಆದರೆ ಮಳೆಯ ಕೊರತೆಯಿಂದ ಆಹಾರ ಪದಾರ್ಥಗಳ ಕೊರತೆಯಾದಾಗ ಸಣ್ಣ ಪ್ರಮಾಣದ ದರೋಡೆ ಕೃತ್ಯದಲ್ಲಿ ಅವರು ತೊಡಗಿದ್ದು ತಿಳಿದುಬರುವುದು. ಇಂತಹ ಚಟುವಟಿಕೆಗಳೂ ಕೂಡ ಬ್ರಿಟೀಷರಿಗೆ ತೊಂದರೆಯನ್ನುಂಟು ಮಾಡಿದ್ದವು. ಅವರು ಎಂದಿಗೂ ಬ್ರಿಟೀಷರ ಕಾನೂನಿಗೆ ಜಗ್ಗಲಿಲ್ಲವೆಂಬುದೇ ಒಂದು ಸ್ತುತ್ಯಾರ್ಹ ಕಾರ್ಯವೆನ್ನಬಹುದು.

**4. ಬೇಡರ ಬುಡಕಟ್ಟಿನ ಸಂಘರ್ಷ ದಾರಿ:**

ಈಗಾಗಲೇ ಹೇಳಿರುವಂತೆ ದೇಶದ ಇತರ ಪ್ರದೇಶಗಳ ಹಾಗೆ, ಮುಧೋಳ ಸಂಸ್ಥಾನದಲ್ಲಿಯೂ ಕೂಡ 1857ರ ಸೆಪ್ಟೆಂಬರ್ ತಿಂಗಳಿನಲ್ಲಿ ಶಸ್ತ್ರಾಸ್ತ್ರ ಕಾಯಿದೆಯನ್ನು ಜಾರಿಮಾಡಲಾಯಿತು. ಈ ಕಾಯಿದೆಯ ಪ್ರಕಾರ ಯಾವುದೇ ವ್ಯಕ್ತಿ, ಶಸ್ತ್ರಾಸ್ತ್ರ, ಮದ್ದುಗುಂಡುಗಳನ್ನು ತಯಾರಿಸುವ, ಮಾರುವ ಅಥವಾ ಬಳಸಲು ಅನುಮತಿ ಇರಲಿಲ್ಲ. ಒಂದು ವೇಳೆ ಇವುಗಳನ್ನು ಹೊಂದುವುದಾದರೆ ವಸಾಹತು ಸರ್ಕಾರದಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿತ್ತು. ಅನುಮತಿ ಇಲ್ಲದೇ ಇಂತಹ ಚಟುವಟಿಕೆಗಳಲ್ಲಿ ಭಾಗಿಯಾದರೆ ಅವರಿಗೆ ಶಿಕ್ಷೆ ಮತ್ತು ದಂಡವನ್ನು ವಿಧಿಸಲಾಗುತ್ತಿತ್ತು. ಸದರಿ ಕಾಯಿದೆಯನ್ನು ದಕ್ಷಿಣ ಮರಾಠ ರಾಜ್ಯದ ಭಾಗವಾಗಿದ್ದ ಮುಧೋಳ ಸಂಸ್ಥಾನದಲ್ಲಿಯೂ ಕ್ರಿ.ಶ. 1857ರ ನವೆಂಬರ್ 10ರ ಹೊತ್ತಿಗೆ ಇದು ಜಾರಿಯಾಗಿ, ರಾಜ್ಯದಲ್ಲಿ ಶಸ್ತ್ರಾಸ್ತ್ರ ಹೊಂದಿರುವ ಎಲ್ಲರೂ ತಕ್ಷಣ ಪರವಾಣಿಗೆ ಪಡೆಯಬೇಕು ಅಥವಾ ಅವುಗಳನ್ನು ಸರ್ಕಾರದ ಗಮನಕ್ಕೆ ತಂದು ಒಪ್ಪಿಸುವ ಷರತ್ತನ್ನು ಹಾಕಲಾಯಿತು. ಸಂಸ್ಥಾನದ ಭಂಟನೂರ ಮತ್ತು ಇತರೇ ಬಹುತೇಕ ಹಳ್ಳಿಯ ಜನರು ಸರ್ಕಾರಕ್ಕೆ ಶಸ್ತ್ರಾಸ್ತ್ರ ಒಪ್ಪಿಸುವ ಅಥವಾ ಪರವಾನಿಗೆ ಪಡೆದುಕೊಂಡರು. ಆದರೆ ಹಲಗಲಿ ಬೇಡ ಬುಡಕಟ್ಟು ಜನ ಇದಕ್ಕೇ ತೀವ್ರ ವಿರೋಧವನ್ನು ವ್ಯಕ್ತಪಡಿಸಿದರು. ಹಲಗಲಿಯ ಜನ ಬ್ರಿಟೀಷರಿಗೆ ತಮ್ಮ ಶಸ್ತ್ರಾಸ್ತ್ರಗಳನ್ನು ಒಪ್ಪಿಸಲು ನಿರಾಕರಿಸಿದರು. ಬ್ರಿಟೀಷ ಸರ್ಕಾರ ಮತ್ತು ಮುಧೋಳ ಸಂಸ್ಥಾನ ಮಾಡಿದ ಎಲ್ಲ ಪ್ರಯತ್ನಗಳು ವಿಫಲವಾದವು. “ಶಸ್ತ್ರಾಸ್ತ್ರಗಳನ್ನು ಹೊಂದುವುದು ನಮ್ಮ ಜನ್ಮಸಿದ್ಧ ಹಕ್ಕು, ಅವುಗಳನ್ನು ಹೊಂದಲು ನಮಗೆ ಯಾರ ಅಪ್ಪಣೆಯೂ ಬೇಡ” ಎಂದು, ಸಂಸ್ಥಾನದ ಅಧಿಕಾರಿಗಳನ್ನು ಗ್ರಾಮದೊಳಗೆ ಪ್ರವೇಶಿಸಲು ಅವಕಾಶ ನೀಡಲಿಲ್ಲ.

**5. ಸಂಘರ್ಷ ತಡೆಯಲು ಮಾಡಿದ ಪ್ರಯತ್ನಗಳು:**

ಹಲಗಲಿಯ ಬೇಡ ಜನಾಂಗದ ನಾಯಕರ ಮೂಲಕ ಸಂಸ್ಥಾನ ಮತ್ತೆ ತನ್ನ ಪ್ರಯತ್ನವನ್ನು ಮುಂದುವರೆಸಿ, ಹೇಗಾದರೂ ಮಾಡಿ ಸರ್ಕಾರಕ್ಕೆ ಶಸ್ತ್ರಾಸ್ತ್ರಗಳನ್ನು ಒಪ್ಪಿಸುವ

ಅಥವಾ ಪರವಾನಿಗೆ ಪಡೆಯುವಂತೆ ಮಾಡಲು ಹಲವಾರು ಬಾರಿ ಸಂಧಾನಗಳು ನಡೆದವು. ಬೇಡರು ಬ್ರಿಟೀಷರೊಂದಿಗೆ ಸಂಘರ್ಷಕ್ಕಿಳಬಾರದೆಂಬುದು ಮುಧೋಳ ಸಂಸ್ಥಾನದ ಒಲವಾಗಿತ್ತು. ಈ ಹಿನ್ನಲೆಯಲ್ಲಿ ಮುಧೋಳದ ಕಾರಬಾರಿಯು ನವೆಂಬರ್ 15ರಂದು ಕಾರಕೂನ ರಾಮರಾವ್ ಭುಜಂಗನನ್ನು ಕಳುಹಿಸಲಾಯಿತು. ಇದು ವ್ಯರ್ಥವಾದಾಗ ಮುಂದೆ ಇಂತಹ ಪ್ರಯತ್ನಗಳು ಮುಂದುವರೆದವು. ಹೀಗೆಯೇ, ಮುಂದೆ ಹಲಗಲಿಯ ನೇರಪ್ಪ ನಾಯಕ, ಭಿಮರಾವ್ ಅನಂತ ಘೋರ್ಪಡೆ, ನಾರೋ ರಾಮಚಂದ್ರ ಪೋತ್ನೀಸ್, ಭಂಟನೂರಿನ ವೀರ ಹನುಮ ನಾಯಕ ಮತ್ತು ಕೊನೆಗೆ ಕುಂದರಗಿಯ ಕೃಷ್ಣನಾಯಕ(ಕೃಷ್ಣಗೌಡರ)ನನ್ನು ಬೇಡರ ಮನವೊಲಿಕೆಗಾಗಿ ಕಳುಹಿಸಿಕೊಡಲಾಯಿತು. ಯಾರೇ ಹಲಗಲಿಗೆ ಬಂದರೂ ಫಲಿತಾಂಶ ಮಾತ್ರ ಶೂನ್ಯ ಎನ್ನುವಂತಾಯಿತು. ಬೇಡರು ಬ್ರಿಟೀಷರೊಂದಿಗೆ ಹೋರಾಡುವ ದೃಢ ನಿರ್ಧಾರವನ್ನು ಮಾಡಿ, ಯಾವುದೇ ಸಂಧಾನಕ್ಕೂ ಬಲಿಯಾಗಲಿಲ್ಲ.

**6. ಬ್ರಿಟೀಷರೊಂದಿಗೆ ಅಂತಿಮ ಸಂಘರ್ಷ:**

ಸರ್ಕಾರ ಮಾಡಿದ ಎಲ್ಲ ಪ್ರಯತ್ನಗಳೂ ವಿಫಲವಾದವು. ಬ್ರಿಟೀಷರು ಹಲಗಲಿಯ ಬೇಡರಿಗೆ ಪಾಠ ಕಲಿಸುವ ನಿರ್ಧಾರ ಮಾಡಿದರು. 1857ರ ನವೆಂಬರ್ 27ರಂದು ಡಬ್ಲೂ. ಎಚ್ ಹೆವಲಾಕ್‌ನಿಂದ ದಕ್ಷಿಣ ಮರಾಠಾ ಸೈನ್ಯದ ಅಧಿಕಾರಿಯಾದ ಮಾಲ್ಕಂ, ಇವನಿಗೆ ಹಲಗಲಿಯ ಎಲ್ಲ ಘಟನಾವಳಿಗಳನ್ನು ತಿಳಿಸಲಾಯಿತು. ಹಲಗಲಿಯಲ್ಲಿ 500ಕ್ಕಿಂತ ಹೆಚ್ಚಿನ ಬೇಡ ಜನಾಂಗ ಒಗ್ಗೂಡಿ ಹೋರಾಡುವ ನಿರ್ಧಾರಮಾಡಿರುವ ಮಾಹಿತಿಯನ್ನು ಕಾರಬಾರಿ ಮೇಲಾಧಿಕಾರಿಗೆ ತಿಳಿಸಿದ್ದನು. ಅಲ್ಲದೆ ಹೊಸಕೋಟೆಯ ಖಿಲ್ಲೇದಾರನಾದ ಬಾಬಜಿ ನಿಂಬಾಳ್ಕರ್ ಇವರಿಗೆ ಸಹಾಯ ಮಾಡುವ ಸುದ್ದಿ ಕೂಡ ಆಂಗ್ಲರಿಗೆ ತಲುಪಿತ್ತು. ಪರಿಸ್ಥಿತಿಯ ಸೂಕ್ಷ್ಮತೆಯನ್ನು ಅರಿತ ಮಾಲ್ಕಂ, ನವೆಂಬರ್ 29ರಂದು, ಬೆಳಗಾವಿಯ ಜಿಲ್ಲಾಧಿಕಾರಿ ಮತ್ತು ದಕ್ಷಿಣ ಮರಾಠಾ ರಾಜ್ಯಗಳ ರಾಜಕೀಯ ಕಾರ್ಯದರ್ಶಿ ವಿಲಿಯಂ ಕೆರ್ ಎಂಬ ಅಧಿಕಾರಿಯನ್ನು ಸುಮಾರು 600 ಬಲಿಷ್ಟ ಸೈನ್ಯದೊಂದಿಗೆ ಹಲಗಲಿಗೆ ಕಳುಹಿಸಿಕೊಡಲಾಯಿತು. ಆತನೂ ಕೂಡ ಬೇಡರಿಗೆ ಅಂತಿಮ ಎಚ್ಚರಿಕೆ ಕೊಟ್ಟು ಮನವರಿಕೆ ಮಾಡಲು ಪ್ರಯತ್ನಿಸಿದ. ಆದರೆ ಅದಾವುದೂ ಯಶಸ್ವಿಯಾಗಲಿಲ್ಲ. ಹಲಗಲಿಯ ಮೇಲಿನ ಆರಂಭದ ಧಾಳಿಯಲ್ಲಿ ಬೇಡರೇ ಮೇಲುಗೈ ಸಾಧಿಸಿದ್ದು ಅವರ ಶೂರತನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಬ್ರಿಟೀಷ್ ಸೇನೆ ಹಲಗಲಿ ಗ್ರಾಮದ ಪ್ರವೇಶಕ್ಕೆ ತಡೆಯಾಗಿದ್ದ ಜಡಗಾ, ಬಾಲ, ಹನುಮಾ, ಭೀಮ, ಮುಂತಾದ ಬೇಡ ನಾಯಕರು ಕಲಿತನದಿಂದ ಬ್ರಿಟೀಷರನ್ನು ಎದುರಿಸಿದರು. 'ರಾಮಿ' ಎಂಬ ಮಹಿಳೆ ಕೂಡ ತನ್ನ ಪ್ರಾಣದ ಹಂಗು ತೊರೆದು ಹೋರಾಡಿ ಬ್ರಿಟೀಷ್ ಸೈನ್ಯದ ಕುದುರೆಗಳ ಕಾಲುಗಳನ್ನೇ ಕತ್ತರಿಸಿದಳು. ಸದರಿ ಮಾಹಿತಿಯನ್ನು ಫ್ಲೀಟ್‌ರವರು ಲಾವಣಿಗಳಲ್ಲಿ ಚಿತ್ರಿಸಿದ್ದಾರೆ. ಗಲಿಬಿಲಿಗೊಂಡ ಬೇಡರ ಪ್ರಭಲ ಹೋರಾಟದಿಂದ ಸೆಟನ್‌ಕೆರ್ ಹೆಚ್ಚಿನ ಸೇನೆ ಕಳುಹಿಸಿಕೊಡಲು ವಿನಂತಿಸಿಕೊಂಡನು. ಮರುದಿನ ಅಂದರೆ, ನವೆಂಬರ್ 30ರಂದು ಲಾ ಟಾಚ್ ಎಂಬ ಅಧಿಕಾರಿ ಹೆಚ್ಚಿನ ಪಡೆಯೊಂದಿಗೆ ಹಲಗಲಿ ಗ್ರಾಮಕ್ಕೆ ಆಗಮಿಸಿದ. ಇಡೀ ಹಲಗಲಿ ಗ್ರಾಮ ಒಂದು ಯುದ್ಧದ ದೃಶ್ಯಕ್ಕೆ ಸಾಕ್ಷಿಯಾದಂತಿತ್ತು. ಇಡೀ ಗ್ರಾಮ ಬೇಡರ ಪಡೆಯ ರಕ್ಷಣೆಯ ಭದ್ರಕೋಟೆಯಂತಾಗಿತ್ತು.

ಸೆಟನ್‌ಕೆರ್ ಕಲಾದಗಿಯಿಂದ ಮತ್ತಷ್ಟು ದಂಡು ಪಡೆಯನ್ನು ಕರಸಿಕೊಂಡನು. ಕಲಾದಗಿಯಿಂದ ಹಲಗಲಿಗೆ ಸಂಪರ್ಕಿಸುವ ದಾರಿಯನ್ನು ಇವತ್ತಿಗೂ ದಂಡಿನ ದಾರಿ ಎಂದು ಕರೆಯುವರು. ಈ ಸಂಘರ್ಷದಲ್ಲಿ ಬ್ರಿಟೀಷ್ ಅಧಿಕಾರಿ ಹೆವಲಾಕ್ ಹತನಾದನು. ಈತನ

ಮರಣದ ನಂತರ ಬ್ರಿಟೀಷರು ಮತ್ತಷ್ಟು ಆಕ್ರಮಣಕಾರಿಯಾಗಿ ಧಾಳಿ ಮಾಡಿ ಇಡೀ ಊರನ್ನೇ ಮುತ್ತಿದರು. ಗ್ರಾಮದ ಮೇಲೆ ಗುಂಡಿನ ಮಳೆಯನ್ನೇ ಸುರಿಸಿದರು. ಬೇಡರು ಕೂಡ ಕಲಿತನದಿಂದ ತಮ್ಮ ಗ್ರಾಮ ರಕ್ಷಣೆಗೆ ಪ್ರಯತ್ನಿಸುತ್ತಿದ್ದರು. ಆದರೆ ಪ್ರಭಲ ಬ್ರಟಿಷ್ ಸೇನೆ ಇಡೀ ಗ್ರಾಮವನ್ನು ಸುಟ್ಟು ಹಾಕುವ ಪ್ರಯತ್ನ ಮಾಡಿತು. ನೂರಾರು ಬೇಡರು ಹೋರಾಡುತ್ತಲೇ ಪ್ರಾಣ ಕಳೆದುಕೊಂಡರು. ಗ್ರಾಮವಿಡೀ ರಕ್ತಮಯವಾಯಿತು. ಇವತ್ತಿಗೂ ಕೂಡ ಸಂಘರ್ಷ ನಡೆದು ರಕ್ತ ಹರಿದ ಪ್ರದೇಶವನ್ನು ರಕ್ತ ಕಾಲುವೆ ಎಂದು ಕರೆಯಲಾಗುತ್ತದೆ. ಇಡೀ ಗ್ರಾಮದ ಮನೆಗಳಿಗೆ ಬ್ರಿಟೀಷರು ಕೊಳ್ಳಿ ಇಟ್ಟರು. ಕೆಲ ಬೇಡರು ಸ್ವಾಭಿಮಾನದಿಂದ ತಮಗೆ ತಾವೇ ಆತ್ಮಾರ್ಪಣೆ ಮಾಡಿಕೊಂಡರು. ಇಡೀ ಗ್ರಾಮವೇ ಸ್ಮಶಾನದಂತಾಯಿತು. ಬದುಕಿದ ಕೆಲವರು ನೆರೆಯ ಪ್ರದೇಶಗಳಿಗೆ ಓಡಿ ಆಶ್ರಯ ಪಡೆಯುವಂತಾಯಿತು. ಪ್ರಮುಖ ನಾಯಕರನ್ನು ಬಂಧಿಸಲಾಯಿತು.

### 7. ಬೇಡರು ಬಳಸಿದ ಆಯುಧಗಳು:

ಹಲಗಲಿಯ ಬೇಡ ಜನರು ಹೋರಾಟದಲ್ಲಿ ಬಳಸಿದ ಆಯುಧಗಳು ಸಾಂಪ್ರದಾಯಿಕವಾಗಿದ್ದವು. ಅವುಗಳನ್ನು ಅವರು ಬೇಟೆಯಾಡಲು ಬಳಸುತ್ತಿದ್ದರು. ಕತ್ತಿ, ಭರ್ಚಿ, ಕೊಡಲಿ, ಕುಡಗೋಲು, ಚಾಕು, ಕಿರುಗೊಡಲಿ ಮುಂತಾದವುಗಳನ್ನು ಬಳಸಿದ್ದರು. ಅವುಗಳೆಲ್ಲವೂ ಸ್ಥಳೀಯವಾಗಿ ತಯಾರಿಸಿದ ಆಯುಧೋಪಕರಣಗಳಾಗಿದ್ದವು. ಇವುಗಳನ್ನು ಎರಕ ಹೊಯ್ದ ಕಬ್ಬಿಣದಿಂದ ತಯಾರಿಸಲಾಗಿತ್ತು. ಅವುಗಳಲ್ಲಿ 30ರಿಂದ 42 ಇಂಚಿನವರೆಗೆ ಉದ್ದ ಮತ್ತು ಇವುಗಳ ಹಿಡಿಕೆಗಳು 5 ರಿಂದ 6 ಇಂಚಿನಷ್ಟಿವೆ. ಹೋರಾಟದಲ್ಲಿ ಭಾಗವಹಿಸಿದ ಜಡಗಾಬಾಲ ಮತ್ತು ಇತರ ನಾಯಕರ ಸಂಬಂಧಿಕರ ಮನೆಯಲ್ಲಿ ಇಂದಿಗೂ ಇಂತಹ ಆಯುಧೋಪಕರಣಗಳನ್ನು ನಾವು ನೋಡುತ್ತೇವೆ. ಅವುಗಳನ್ನು ಮನೆಯಲ್ಲಿ ಮತ್ತು ಗುಡಿಗಳಲ್ಲಿ ಇಟ್ಟು ಪೂಜಿಸುವರು. ಗ್ರಾಮದ ಹೊರವಲಯದಲ್ಲಿ ಕಂಡುಬರುವ ಬೃಹತ್ ಆದ ಅರೆಯುವ ಕಲ್ಲಿನ ಉಪಕರಣವನ್ನು ನೋಡಬಹುದು. ಇದಕ್ಕೆ ಮದ್ದಿನ ಗಡಿಗೆ ಎಂದು ಕರೆಯುವರು. ಸಶಸ್ತ್ರ ಹೋರಾಟದ ಸಂದರ್ಭದಲ್ಲಿ ಇದನ್ನು ಮದ್ದನ್ನು ಸಿದ್ಧಪಡಿಸಲು ಬಳಸಲಾಗುತ್ತಿತ್ತೆಂದು ತಿಳಿದುಬರುತ್ತದೆ.

### 8. ಹಲಗಲಿಯ ಸಂಘರ್ಷ ಉಲ್ಲೇಖಿತ ಒಂದು ಲಾವಣಿ ಪದ:

1857ರ ಹಲಗಲಿಯ ಬೇಡರ ಹೋರಾಟದ ಕುರಿತು ಹಲವಾರು ದೇಶೀಯ ಮತ್ತು ವಿದೇಶಿ ದಾಖಲೆಗಳು ನಮಗೆ ದೊರಕುತ್ತವೆ. ಅವುಗಳಲ್ಲಿ ಹಲಗಲಿಯ ಬೇಡರ ಮತ್ತು ಬ್ರಿಟೀಷರ ಮಧ್ಯೆ ನಡೆದ ಸಂಘರ್ಷದ ಬಗ್ಗೆ ಫ್ಲೀಟರು ಲಾವಣಿಗಳ ಮೂಲಕ ಅಲ್ಲಿನ ಇತಿಹಾಸವನ್ನು ಕಟ್ಟಿಕೊಡಲು ಪ್ರಯತ್ನಿಸಿರುವರು. ಇಂಡಿಯನ್ ಆಂಟಿಕ್ವರಿಯ 16ನೇ ಸಂಪುಟದಲ್ಲಿ ಒಟ್ಟು 9 ಪದ್ಯಗಳನ್ನು ದಾಖಲಿಸಿದ್ದಾರೆ. ಅವುಗಳಲ್ಲಿ ಕಂಪನಿ ಸರ್ಕಾರದ ನೀತಿಗಳು, ಬೇಡ ನಾಯಕರ ಶೌರ್ಯ, ಬಳಸಿದ ಆಯುಧೋಪಕರಣಗಳು, ಬ್ರಿಟೀಷರು ಮಾಡಿದ ಆಕ್ರಮಣದ ಚಿತ್ರಣ, ಊರಿನ ಲೂಟಿ, ಮುಂತಾದವುಗಳನ್ನು ಕಣ್ಣಿಗೆ ಕಟ್ಟುವಂತೆ ಕಟ್ಟಿಕೊಟ್ಟಿದ್ದಾರೆ, ಇವು ಆ ಗ್ರಾಮದ ಇತಿಹಾಸವನ್ನು ತಿಳಿಯಲು ಪ್ರಮುಖವಾದ ಚಾರಿತ್ರಿಕ ದಾಖಲೆಗಳಾಗಿವೆ. ಇವುಗಳಲ್ಲಿ ಒಂದು ಪದ್ಯವನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

**ಜಡಗ ಹೇಳತಾನ ಹೊಡಿ ಇವರನಾ ಈಗ ಘಾತಕರೋ ಇವರಾ**
**ವಂಚನೆಘಾತ ಮಾಡಿ ನಂಬಿಕೆಲೆ ಮಾಡತಾರು ಪಿತೂರಾ**

ಮಾಸಮಾಡಿ ಬಲದೇಶ ತಗೋತಾರ ಮುಂದ ನಮಗ ಗೋರಾ
ಅಂದ ಹೊಡೆದಾರೊ ಒಂದು ಗುಂಡಿಗೆ ಆದ ಸಾಹೇಬ ಟಾರಾ

ಕಾರ್ಸಾಹೇಬ್ ಬೆಂಕಿಚೂರ ಆಗಿ ತಾನು ಲೂಟಿ ಮಾಡಅಂದ ಊರ
ಹುರುಪಿಲಿ ಹೊಡದರ ಮಳಿ ಆದ ಹಾಗೆ ಗುಂಡ ಸುರಿಸಿದವು ಬರಪೂರಾ

ಹನುಮ ಹೇಳತಾನ ಗುಂಡ ಹೊಡೆದಾಕೇರ ಕೆಡವುನ್ಅಷ್ಟು ಬಾರಾ
ಮುನ್ನೂರು ಮಂದಿ ಇನ್ನ ಮೇಗೆ ಬಿಟ್ಟ ಆಗ ನೋಡರಿ ಜೋರಾ

ಭೀಮನು ಎದಿರಿಗೆ ನಿಂತಾ
ಐನೂರ ಮಂದಿಗೆ ಮಲತಾ

ಬಾಲನು ಮಾಡಿದ ಕಸರತ್ತಾ
ಕುದರಿಯ ಕಡಿದನೋ ಹತ್ತಾ

ರಾಮನ ಕಡತ ವಿಪರೀತಾ
ಕಾವಲಿ ಹರಿತೊ ರಕ್ತಾ

ಸಾವಿರ ಆಳಿಗೆ ಒಬ್ಬ ಮಲತಾ
ಕೂಗತಾನೊ ಕಡಿಕಡಿರ್ ಎಂತಾ

ನಾಲ್ಕು ಮಂದಿ ಹೀಗೆ ಕಡದ ಸತ್ತರೋ ಭಂಟರೆನಿಸಾರ ಜನಕ

**9. ಪರಿಣಾಮಗಳು:**

ಬ್ರಿಟೀಷರ ವಿರುದ್ಧ ಹೋರಾಡಿದ ಹಲಗಲಿಯ ಬೇಡರು ಬ್ರಿಟೀಷರ ಬಲಾಢ್ಯ ಸೈನ್ಯದ ಎದುರು ಸೋಲುವಂತಾಯಿತು. ದಕ್ಷಿಣ ಮರಾಠ ಮತ್ತು 28ನೇ ಸ್ಥಳೀಯ ಕಾಲ್ದಳ ಪಡೆ ಜಂಟಿಯಾಗಿ ಬೇಡರ ಹೋರಾಟವನ್ನು ತಣಿಸಿದರು. ಅವರ ಜೀವನಾಧಾರವಾಗಿದ್ದ ಕಾಳುಕಡಿ, ದನಕರುಗಳನ್ನು ನಾಶಪಡಿಸಲಾಯಿತು. ಮಕ್ಕಳು ಮತ್ತು ಮಹಿಳೆಯರೆನ್ನದೆ ಎಲ್ಲವನ್ನೂ ಬ್ರಿಟೀಷರು ಆಪೋಷನ ಮಾಡಿದರು. ಗ್ರಾಮದಲ್ಲಿ ಯಾರೂ ಕೂಡ ಉಳಿಯಲಿಲ್ಲ. ಇಡೀ ಗ್ರಾಮವನ್ನೇ ಸುಡಲಾಯಿತು. ಇದರ ಜೊತೆಗೆ ಅಳಿದುಳಿದ ವಸ್ತುಗಳನ್ನು ಬ್ರಿಟೀಷರು ದೋಚಿದರು. ಇವುಗಳಲ್ಲಿ ಎತ್ತುಗಳು, ಹಸುಗಳು, ಎಮ್ಮೆಗಳು, ಕರುಗಳು, ಕೋಣಗಳು, ಕತ್ತೆ, ಮೇಕೆ, ದಿನಸಿ ವಸ್ತು, ಹಗ್ಗ ಮುಂತಾದವುಗಳು ಬ್ರಿಟೀಷರ ವಶಕ್ಕೆ ಬಂದು, ಅವುಗಳನ್ನು ಬ್ರಿಟೀಷ್ ಸರ್ಕಾರದ ಉಸ್ತುವಾರಿಗೆ ನೀಡಲಾಯಿತು.

ಸಂಖ್ಯೆಯಲ್ಲಿ ಕಡಿಮೆ ಇದ್ದರೂ, ಬೇಡರು ಧೈರ್ಯದಿಂದ ಹೋರಾಡಿ ಕಲಿತನವನ್ನು ಮೆರೆದರು. ಹೋರಾಟದಲ್ಲಿ ನೂರಾರು ಸಂಖ್ಯೆಯ ಬೇಡರು ಪ್ರಾಣ ಕಳೆದುಕೊಂಡರು. 29 ಬೇಡರು ಸ್ವಯಂ ಆತ್ಮಾರ್ಪಣೆ ಮಾಡಿಕೊಂಡರು. ಒಟ್ಟು 150ಕ್ಕಿಂತ ಹೆಚ್ಚಿನ ಜನ ಅಸುನೀಗಿದರು. ಅಳಿದುಳಿದ 300ಕ್ಕಿಂತ ಹೆಚ್ಚು ಜನರನ್ನು ಬಂಧಿಸಲಾಯಿತು. ಅದರಲ್ಲಿ 29 ಜನರ ವಿರುದ್ಧ ಕೋರ್ಟು ಖಟ್ಲೆ ಹಾಕಲಾಗಿ, 19 ಬೇಡರು ತಪ್ಪಿತಸ್ಥರೆಂದು ಘೋಷಿಸಲಾಯಿತು. 13ಜನರನ್ನು 1857ರ ನವೆಂಬರ 11 ರಂದು, ಶುಕ್ರವಾರ ಸಂತೆಯ ದಿನ ಮುಧೋಳದ ಪ್ರಮುಖ ಬೀದಿ ಉತ್ತರಗೇಟ್ ಎಂಬ ಸ್ಥಳದಲ್ಲಿ ಸಾರ್ವಜನಿಕವಾಗಿ ಗಲ್ಲಿಗೇರಿಲಾಯಿತು. ಜಿಡಗಾಬಾಲರನ್ನೊಳಗೊಂಡ 6 ಜನರನ್ನು ನವೆಂಬರ್ 14 ರಂದು ಹಲಗಲಿಯಲ್ಲಿಯೇ

ಗಲ್ಲಿಗೇರಿಸಲಾಯಿತು. ಕೆಲವು ಬೇಡರು ತಪ್ಪಿಸಿಕೊಂಡು ಸುರಪುರ ಸಂಸ್ಥಾನಕ್ಕೆ ಪಲಾಯನಗೊಂಡರು. ಈ ಘಟನೆಯ ನಂತರ ಮುಧೋಳ ಸಂಸ್ಥಾನದ ವ್ಯಾಪ್ತಿಯಲ್ಲಿನ ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೆ ಒಪ್ಪಿಸಿದರು. ಜಡಗಪ್ಪ ಜಡಗಣ್ಣವರ, ಬಾಳಪ್ಪ ಕೊಳ್ಳನ್ನವರ, ಹನುಮಪ್ಪ ಪೂಜೇರಿ, ಬೆಹುಗಾರ ಭೀಮಪ್ಪ, ರಾಮವ್ವ, ಬಸಪ್ಪ, ಮಾದರ ದ್ಯಾಮಣ್ಣ, ಬಾಬಜಿ ನಿಂಬಾಳ್ಕರ್, ದಾದಣ್ಣ, ದ್ಯಾಮವ್ವ, ಇನ್ನೂ ಮುಂತಾದವರು ಘರ್ಷಣೆಯಲ್ಲಿ ಹುತಾತ್ಮರಾದ ಪ್ರಮುಖರು.

**10. ಉಪಸಂಹಾರ:**

ಹೀಗೆ ಹಲಗಲಿಯ ಬೇಡ ಜನಾಂಗ ಬ್ರಿಟೀಷರ ವಿರುದ್ದ ಶೌರ್ಯದಿಂದ ಹೋರಾಡಿ ತಮ್ಮ ಘನತೆ –ಗೌರವವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಿದರು. ಬ್ರಿಟೀಷರ ಅವೈಜ್ಞಾನಿಕ ಶಸ್ತ್ರಾಸ್ತ್ರ ಕಾಯಿದೆಯನ್ನು ವಿರೋಧಿಸಿದರು. ಈ ಗ್ರಾಮದ ಜನ ಮುಧೋಳ ಸಂಸ್ಥಾನ ಮತ್ತು ಬ್ರಿಟೀಷರಿಗೆ ಮಾರಕವಾಗುವಂತಹ ಯಾವುದೇ ಚಟುವಟಿಕೆಗಳಲ್ಲಿ ತೊಡಗಿಕೊಂಡ ಉದಾಹರಣೆಗಳಿಲ್ಲ. ಅವರು ತಮ್ಮ ಕುಲಕಸುಬಾದ ಬೇಟೆ ಮತ್ತು ಇನ್ನಿತರ ವೃತ್ತಿಗಳಲ್ಲಿ ತೊಡಗಿಕೊಂಡು ಶಾಂತವಾಗಿ ಬದುಕನ್ನು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದರು. ಆದರೆ ಭಾರತೀಯರ ಹೋರಾಟದ ಕಿಚ್ಚಿನಿಂದ ಹೆದರಿದ ಬ್ರಿಟೀಷರು, ಅನಾವಶ್ಯಕವಾಗಿ ಶಸ್ತ್ರಾಸ್ತ್ರ ಕಾಯಿದೆಯನ್ನು ಜಾರಿಗೆ ತಂದು ಎಲ್ಲರನ್ನೂ ಹೆದರಿಸುವ ಪ್ರಯತ್ನ ಮಾಡಿದರು. ಇಂತಹ ಕಾಯಿದೆಯನ್ನು ವಿರೋಧಿಸಿದವರು ಈ ಹಲಗಲಿಯ ಬೇಡ ಬುಡಕಟ್ಟು ಜನ ಎಂಬುದನ್ನು ನಾವು ಮರೆಯಬಾರದು. ತಮ್ಮ ಪ್ರಾಣದ ಹಂಗು ತೊರೆದು, ಹೊರಗಿನ ಯಾವುದೇ ನೆರವು ಅಥವಾ ಸಹಕಾರವಿಲ್ಲದೆ ಬಲಾಢ್ಯ ಬ್ರಿಟೀಷರನ್ನು ಎದುರಿಸಿದ ಅವರ ಕಿಚ್ಚು ಇಡೀ ದೇಶದಲ್ಲಿಯೇ ಒಂದು ಮಾದರಿ ಎನ್ನಬಹುದು. ಹಲಗಲಿಯ ಬೇಡ ಜನಾಂಗ ಎಷ್ಟು ಶೂರರಾಗಿದ್ದರೆಂದರೆ, ಇವರನ್ನು ಎದುರಿಸಲು ಮುಂಬೈ ಪ್ರಾಂತ್ಯದ 7 ರಿಂದ 10 ಜನ ನುರಿತ ಸೈನ್ಯಾಧಿಕಾರಿಗಳೇ ಹಲಗಲಿ ಗ್ರಾಮಕ್ಕೆ ಬರುವಂತಾಯಿತು. ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಬೇಡರು ಧೈರ್ಯದಿಂದ ವಸಾಹತು ಸರ್ಕಾರವನ್ನು ಎದುರಿಸಿದ ರೀತಿ, ಮುಂದೆ ಬ್ರಿಟೀಷರ ವಿರುದ್ಧದ ಹೋರಾಟಕ್ಕೆ ಆದರ್ಶವಾಯಿತೆಂದು ಹೇಳಬಹುದು. ಪ್ರಸ್ತುತ ಹಲಗಲಿಯ ಈ ವೀರರ ಕುರಿತು ಪ್ರಸಿದ್ಧ ನಟ ಡಾಲಿ ಧನಂಜಯ ಅಭಿನಯದ 'ಹಲಗಲಿ' ಎಂಬ ಬಹುಭಾಷಾ ಸಿನೇಮಾವೊಂದು ಸಿದ್ಧಗೊಳ್ಳುತ್ತಿದೆ ಎಂಬುದು ಹಲಗಲಿಯ ಬೇಡ ಬುಡಕಟ್ಟು ಜನಾಂಗಕ್ಕೆ ನಾವು ನೀಡುವ ಗೌರವವೆನ್ನಬಹುದು. ಹೀಗೆ ಬ್ರಿಟೀಷರ ವಿರುದ್ಧ ಎಲೆ ಮರೆಯ ಕಾಯಿಯಂತೆ, ಹೋರಾಟ ಮಾಡಿದ ಹಲವಾರು ಜನಾಂಗಗಳ ಕುರಿತು ಆಳವಾದ ಅಧ್ಯಯನ ಮೂಡಿಬರಲಿ ಎಂಬ ಸದಾಶಯ ನಮ್ಮದು.

**ಪರಾಮರ್ಶನ ಗ್ರಂಥಗಳು:**


1. ಮಂಜುನಾಥ ಬೇವಿನಕಟ್ಟಿ, ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿಯ ಬಂಡಾಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009
2. ಕ್ಯಾತನಹಳ್ಳಿ ರಾಮಣ್ಣ, ಫ್ಲೀಟರು ಸಂಗ್ರಹಿಸಿದ ಲಾವಣಿಗಳು, ಕೆ.ಆರ್.ಐ., ಮೈಸೂರು ವಿಶ್ವವಿದ್ಯಾಲಯ, 1991
3. ವಸಂತಕುಮಾರ್.ಬಿ.ವಿ., ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕಹಲಗಲಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, 2022
4. ಕ್ಯಾತನಹಳ್ಳಿ ರಾಮಣ್ಣ, ಹಲಗಲಿಯ ಬೇಡರು, ವಿಸ್ಮಯ ಪ್ರಕಾಶನ, ಮೈಸೂರು, 2009
5. ಜೀಲಾನಿ ಎಸ್.ಎ., ಬಿಜಾಪುರ ಜಿಲ್ಲಾ ಗೆಜೆಟಿಯರ್, ಕರ್ನಾಟಕ ಸರ್ಕಾರ, 2006
6. ಎಡ್ಗರ್ ಥರ್ಸ್ಟನ್, ಕಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರ್ನ ಇಂಡಿಯಾ, ಸಂ1, ಎ ಮತಿ ಬಿ, ಸರ್ಕಾರಿ ಮುದ್ರಣಾಲಯ, ಮದ್ರಾಸ್, 1909
7. ಇಂಡಿಯನ್ ಆಂಟಿಕ್ವೆರಿ, ಸಂ16, 1887
8. ಹಾಲಪ್ಪ.,ಜಿ.ಎಸ್. ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ, ಸಂ1, ಮೈಸೂರು ಸರ್ಕಾರ, 1961
9. ರಾಮಸ್ವಾಮಿ ಎಸ್.ಆರ್., ಎ ಪ್ಯಾಸೇಜ್ ಥ್ರೂ ಇಂಡಿಯಾ, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು 2022



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.